Regd No B G 155

(174) 2

22—9—1965

ಸತ್ಯವಾದಿ

49th Year
Satyavadi
DAILY
MYSORE 4

ಸಂಸ್ಥಾಪಕರು — ಅಂಬಮನೆ ಸಿಂಸ್ಕೇದಾರ್ ಎಂ ವಿ ಸುಬ್ಬರಾಯುರು

ಸಂಪಾದಕರು — ಧರ್ಮಪ್ರಚಾರನಿರತ ಎಂ ಎಸ್ ಕೃಷ್ಣರಾವ್

2 ಪೈಸೆ

ಮುಸ್ಲಿಂರ ಬೆಂಬಲ

ಮಂಗಳೂರು— ಶುಕ್ರವಾರ ಕೇಂದ್ರ ಜುವಸ್ಥಾ ಮಸೀದಿ ಸೆರಿ ಎಲ್ಲ ಮಸೀದಿಗಳಲ್ಲಿಯೂ ಭಾರತದ ವಿಜಯಕ್ಕಾಗಿ ಪ್ರಾರ್ಥನೆ ನಡೆಸಲಾಯಿತು — ಪಾಕಿಸ್ತಾನದ ದುರಾಕ್ರಮಣವನ್ನು ಖಂಡಿಸಿ ಅಡಸ್ಥೆದರಿಸಲು ಸಂಕಲ್ಪಕ್ಕೆ ಮುಸ್ಲಿಂ ಜನತೆಂಗದ ಪೂರ್ಣ ಬೆಂಬಲ ನೀಡಲು ನಿರ್ಧರಿಸಲಾಯಿತು

●

ಟೆಲಿವಿಜ್ಞ

ನವದೆಹಲಿ— ನಾಲ್ಕನೇ ಯೋಜನೆಯಲ್ಲಿ ಟೆಲಿವಿಜ್ಞ ಸ್ಟೇಷನ್ನುಗಳನ್ನು ಬೊಂಬಾಯಿ, ಕಲ್ಕತ್ತಾ, ಮದರಾಸು ಸ್ಥಾನಪುಗಳಲ್ಲಿ ಸ್ಥಾಪಿಸಲು ಮತ್ತು ಡೆಲ್ಲೀ ಯಾಸನಟ್ಟು ವಿಸ್ತರಿಸಲೂ 4-7 ಕೋಟಿ ರೂಗಳು ನಿಗದಿಮಾಡಲಾಗಿದೆ ಎಂದೂ, ಇತರ ಸ್ಟೇಷನ್ನುಗಳ ಕೆಲಸ ಪ್ರಾರಂಭಿಸಿದಾಗ 1 ಲಕ್ಷ ಟಿ ವಿ ಸೆಟ್ ಗಳಿಗೆ ಕೇಳಕೆ ಇರುವುದೆಂದೂ ಪಾರ್ಲಿಮೆಂಟಿನಲ್ಲಿ ತಿಳಿಸಲಾಯಿತು

❁

ಹುಲಿ ಮರಿಗಳು

ಪಶ್ಚಿಮ ಬಂಗಾಳ ಸರಕಾರಕ್ಕೆ ರಷ್ಯದ ಮಾಜಿ ಪ್ರಧಾನಿ ಕ್ರುಶ್ಚೇವರು ಬಹುಮಾನಿಸಿದ ಉಸ್ಸೂರಿ ಹುಲಿ ಸಾಕಿಯು ಕಳೆದ ತಿಂಗಳು ಎರಡು ಮರಿಗಳನ್ನು ಹಾಕಿತೆಂದೂ, ಮೈಕೈಯನ್ನು ಬಹಳ ಮುದ್ದಾಗಿ ನೋಡಿಕೊಳ್ಳುತ್ತಿದೆಯೆಂದೂ ಹಿಮಾಲಯ ಜೂಲಾಜಿಕಲ್ ಪಾರ್ಕಿನಿಂದ ಪ್ರಕಟವಾದ ಬುಲೆಟಿನ್ ತಿಳಿಸುತ್ತದೆ : ಹಿಂದೆ ಇದು ಪರಿಹಾಕಿದಾಗ ಅವುಗಳನ್ನು ನಿಕೃಷ್ಟವಾಗಿ ಕಾಣಲಾಗಿತ್ತು ಹಾಲನ್ನು ಕೊಡದಿದ್ದುದರಿಂದ ಅವು ಸತ್ತು ಹೋದವು —Truth

---

ನಾಳೆಯ ಪಂಚಾಂಗ

ದೈವಜ್ಞ ಶಿಖಾಮಣಿ
ಅಸ್ಥಾನಮಹಾವಿದ್ವಾನ್ ಧರ್ಮಾಧಿಕಾರಿ
ರಾಜಕಾರ್ಯಾಪೇಕ್ಷ, ಜ್ಯೋತಿರ್ವಿದ್ಯಾನಿಧಿ
ಸಂಪಶ್ಯಜ್ಞಜೋಯಿ ಮಂದರಂಡ

23 ಗುರುವಾರ ತೃಯೋದಶಿ ಮಖ

ವಾರ್ತಾ ವಿಶೇಷಗಳು

ಬೆಂಗಳೂರು— ಜವನರಿಗೆ ಕಳುಹಿಸಲು ಸಿಗರೇಟು, ಸಿಹಿ, ಕಾಫೀಪುಡಿ ಮುಂತಾದುವುಗಳನ್ನು ಶೇಖರಿಸಲು ಮನವಿ ಮಾಡಲಾಗಿದೆ

★

ನವದೆಹಲಿ— ಭಾರತದಲ್ಲಿ 50 ಸ್ಥಾನಿಕ ಟಿವಿಟ್ ನಿರಾಶ್ರಿತರಿರುವರೆಂದು ಪಾರ್ಲಿಮೆಂಟಿನಲ್ಲಿ ತಿಳಿಸಲಾಯಿತು

●

ನವದೆಹಲಿ— ಚೀನದ ನಡವಳಿಕೆಗೆ ಶಾಂತಿಗೆ ಭಂಗವೆಂದು ಬಲ ಕಮ್ಯೂನಿಸ್ಟ್ ಪಾರ್ಟಿ ಅಭಿಪ್ರಾಯಪಟ್ಟಿದೆ

★

ನವದೆಹಲಿ— ಭಾರತದ ರಕ್ಷಣೆಗೆ ತಾವು ಹೊಡೆದಾಡಲು ಸಿದ್ಧವೆಂದು 50 ಸಾವಿರ ಕೂರ್ಕರು ತಿಳಿಸಿದ್ದಾರೆ.

❁

ಮೈಸೂರು— ಕಾಲೇಜುಗಳಲ್ಲಿ ಕಡ್ಡಾಯ ಕಾಣಿಕೆ ವಸೂಲಿ ತಡೆಗಟ್ಟಲು ಮುಖ್ಯಮಂತ್ರಿಗಳು ಸನ್ನತಿಸಿರುವರೆಂದು ವಿಶ್ವವಿದ್ಯಾಲಯದ ಉಪಕುಲಪತಿಯವರು ಹೇಳಿದರು

★

ಬೆಂಗಳೂರು— ಭಾರತಕ್ಕೆ ಪೂರ್ಣ ಜಯ ಲಭಿಸಲು ಗವಿ ಗಂಗಾಧರ ಸ್ವಾಮಿ ಸರ್ಕಲು ಬಳಿ ಶ್ರೀ ಲಲತಾಪರಮೇಶ್ವರ ಸನ್ನಿಧಿಯಲ್ಲಿ -ಶ್ರೀ ಶಂಕರನಾರಾಯಣ ಶಾಸ್ತ್ರಿಗಳು ತಾ॥ 30 ರಂದ ಮಹೋಪವಾಸ ಕೈಗೊಂಡಿರುವರು.

★

ವಾಷಿಂಗ್ಟನ್— ಭಾರತಕ್ಕೆ ಚೀನಾ ಕೊಟ್ಟಿರುವ ಕಟ್ಟಕಡೆ ಎಚ್ಚರಿಕೆಯು ತೀವ್ರ ಪರಿಸ್ಥಿತಿ ಎದುರಿಸುವ ವಿಚಾರದಲ್ಲಿ ಅಧ್ಯಕ್ಷ ಜಾರ್ಜಸನ್ನರ ತಮ್ಮ ಸ್ವಧಾನ ಸಲಹೆಗಾರರೊಡನೆ ಪರ್ಯಾಲೋಚಿಸುತ್ತಿರುವರೆ : ಅಮೇರಿಕಾಕ್ಕೆ ಪ್ರಬಿಸ ಉನ್ನತ ಮಂತ್ರಿಗಳೊಬ್ಬರು ಬಂದಿದ್ದು ಈ ವಿದೇಶದಲ್ಲಿ ಮಗ್ನರಾಗಿದ್ದಾರೆ.

ಇಂಡೋರಿನಲ್ಲಿ ಟ್ರೇಡ್ ಯೂನಿಯನ್ನ್

ಗಳವರ ಭಾರಿ ಪ್ರತಿಭಟನಾ ಮೆರವಣಿಗೆ

ಇಂಡೋರು — ವಿವಿಧ ಟ್ರೇಡ್ ಯ ಸಿಬ್ಬಂದಿಗಳಿಗೆ ಸೇರಿದ 15 ಸಾವಿರ ಮಂದಿ ಪಾಕಿಸ್ತಾನ ವಕ್ತು ಚೀನಾದ ದುರಾಕ್ರಮಣ ನೀತಿಯನ್ನು ಪ್ರತಿಭಟಿಸಿ ಭಾರಿ ಮೆರವಣಿಗೆ ನಡೆಸಿದರು.

═

ನವದೆಹಲಿ — ಭಾರತದ ವಿ. ಆ. ಲೆ ಪಾಕಿಸ್ತಾನವು ಅಮೇರಿಕಾ ಶಸ್ತ್ರಾಸ್ತ್ರ ಉಪಯೋಗಿಸುತ್ತಿರುವ ಬಗ್ಗೆ ಏನು ಮಾಡಲ್ಲೂ ಸಾಧ್ಯವಿಲ್ಲವೆಂದು ಅಮೇರಿಕಾ ಒಪ್ಪಿರುವುದಾಗಿ ಲೋಕಸಭೆಯಲ್ಲಿ ತಿಳಿಸಲಾಯಿತು

❁

ನವದೆಹಲಿ— ಜವನರ ಮಕ್ಕಳಿಗೆ ಉಚಿತ ಶಿಕ್ಷಣ ಕೊಡಲು ಕೇಂದ್ರವು ಅನೇಕ ರಾಜ್ಯಗಳಿಗೆ ವನವಿಮಾಡಿದೆ.

ಜಂಡೀಘಟ್ಟ— 3 ಅಥವಾ 4 ಮಕ್ಕಳನ್ನು ಯುದ್ಧಕ್ಕೆ ಸೇರಿಸುವ ತಂದೆತಾಯಿಗಳಿಗೆ ಯುದ್ಧದ ಜಹಗೀರು ಕೊಡುವ ಸ್ಕೀಮನ್ನು ಪಂಜಾಬು ಸರಕಾರ ತಯಾರಿಸಿದೆ.

═

ಅಂಬಾಲಾ ಗಡಿ ಗ್ರಾಮ ಶಂಭುವಿನಲ್ಲಿ ಪಾಕಿಸ್ತಾನದ ಒಂದು ವಿಮಾನವನ್ನು ಹೊಡೆದು ಕೆಳಕ್ಕೆ ಕೆಡವಲಾಯಿತು — ಚೀಲಾ ಬಿಚಿಡಿನಲ್ಲಿ ಪಾಕಿಸ್ತಾನಿ ಸೇಬರು ಜಟ್‌ಗಳು ಬಾಂಬು ಮಾಡಿದವು ; ಒಂದು ಗುರುದ್ವಾರಕ್ಕೆ ಸ್ವಲ್ಪ ಹಾನಿಯಾಗಿದೆ — ಲಾಹೋರು ಸೆಕ್ಟರಿನಲ್ಲಿ ವಿಮಾನಯುದ್ಧದಲ್ಲಿ ಒಂದು ಪಾಕಿಸ್ತಾನಿ ಸೇಬರು ಜಟ್ ಹೊಡೆದುರುಳಿಸಲಾಯಿತು — ಸಿಯಾಲಕೋಟೆ ಭಾಗದಲ್ಲಿ ಭಾರತ ಸೈನ್ಯವು ಹೊಸೆದಾಗಿ ಮುಂದೆ ಬಂದು ಅನೇಕ ಶತ್ರು ಸ್ಥಾನಗಳನ್ನು ಆಕ್ರಮಿಸಿಕೊಂಡಿದೆ

★

ಉತ್ತರ ಗಡಿಯಲ್ಲಿ ಚೀನಾದ ಅಕ್ರಮಣ ಚಟುವಟಿಕೆಗಳ ಬಗ್ಗೆ ಭಾರತ ಚೀನಾಕ್ಕೆ ಪ್ರತಿಭಟನೆ ಮಾಡಿದೆ

ನಾಥೂಲ ಬಳಿ ಚೀನರು ಸಿಕ್ಕಿಂ ಗಡಿದಾಟಿ ನಮ್ಮ ರಕ್ಷಣಾ ಬಲಗಳ ಮೇಲೆ ಗುಂಡು ಹಾರಿಸಿದರು ನಮ್ಮವರು ಗುಂಡನ್ನು ಹಾರಿಸಿದ ಮೇಲೆ ಅವರು ವಾಪಸಾದರು

ಸೈಯಲ್ಕೋಟ್ ಉತ್ತರದಲ್ಲಿ ಭಾರತ ಸೇನೆಗಳು ತಿಲಕಪುರ ಮತ್ತು ಪುಹಾದಿ ಪುರಗಳಲ್ಲಿ ಎಂಡು ಪಾಕೀಸ್ತಾನಿ ಠಾಣ್ಯಗಳನ್ನು ಹಿಡಿದರು

ಭಾರತೀಯರ ಸ್ವತ್ತುಗಳು ಇಂಡೋನೇಷಿಯಾದಲ್ಲಿ ರಾಷ್ಟ್ರೀಕರಣ ಆದವು.

ಕರಾಚಿಯಲ್ಲಿರುವ ಅಮೆರಿಕ ವಾರ್ತಾ ಕಚೇರಿಯನ್ನು ಸುಮಾರು ಹತ್ತು ಸಹಸ್ರ ಪಾಕೀಸ್ತಾನಿಗಳು ದಹನ ಮಾಡಿದರು. ವಿಶ್ವಸಂಸ್ಥೆ ಬೇಲಿದ್ದ ಬ್ರಿಟಿಷ್ ಧ್ವಜ ಕಿತ್ತಹಾಕಿದರು.

★

ಭಾರತವು ಪಾಕಿಸ್ತಾನದ ನಾಗರೀಕರ ಮೇಲೆ ಬಾಂಬು ಹಾಕಲು ಇಚ್ಛಿಸುವುದಿಲ್ಲವೆಂದು ಸರ್ಕಾರಿ ವಕ್ತಾರರೊಬ್ಬರು ಹೇಳಿದರು

●

ವಾಸ್ಕೊ— ಇಂಡೋ-ಪಾಕ್ ಕದನದಲ್ಲಿ ಚೀನಾ ಮತ್ತು ಇಂಡೋನೇಷಿಯ ದೂರವಿರಬೇಕೆಂದು ರಷ್ಯಾ ಎಚ್ಚರಿಸಿದೆ

★

ನವದೆಹಲಿ— ಪೂರ್ವ ಗಡಿಯಲ್ಲಿ ಪಾಕಸ್ತಾನ ಯುದ್ಧ ಚಟುವಟಿಕೆ ನಡೆಸುತ್ತಿದೆ

ಪೂರ್ವ ಕರ್ಮ ವಿಪಾಕವು

★

ಲೇಖಕರು:— ಎ ನ ಅಯ್ಯಂಗಾರ್, ಹೊಂಗನೂರು

—o—

[ಮುಂದುವರಿದುದು]

ದುರ್ಜನನಾಗಿ ಮೇಲೆ ಹೇಳಿದ ಪಾಪಾಯಶ್ಚಿತ್ತಗಳನ್ನು ಮಾಡದವನು ನರಕಾನುಭವಾನಂತರ ಶ್ವಾಸಕಾಸ ರೋಗಿಯಾಗಿ ಹುಟ್ಟುತ್ತಾನೆ; ಈ ಪಾಪ ಪರಿಹಾರಾರ್ಥವಾಗಿ ೧೦೪ ಪಲಗಳ ತೂಕದ ಕುಪ್ಪಸವನ್ನು ಯಥಾವಿಧಿಯಾಗಿ ದಾನ ಮಾಡಬೇಕು; ಬ್ರಾಹ್ಮಣನಾದವನು ತನಗೆ ಯುಕ್ತವಾದ ಸ್ನಾನಜಪತಪಾದಿಗಳನ್ನು ಮಾಡದೇ ಭೋಜನಮಾಡಿದರೆ ಬಿಕ್ಕಳಿಕೆ ರೋಗ ಹೊಂದುತ್ತಾನೆ: ಈ ಪಾಪ ನಿವಾರಣೆಗೆ ಮೂರು ಚಾಂದ್ರಾಯಣವನ್ನೂ ನೂರು ಕೃಚ್ಛ್ರ ಚಾಂದ್ರಾಯಣಗಳನ್ನೂ ಮಾಡಬೇಕು.

ಚಾಂಡಾಲ ಸ್ತ್ರೀ ಸಮಾಗಮ ಮಾಡಿದವನಿಗೆ ಮೇಹರೋಗವು, ಕ್ಷುದ್ರ ರೋಗಗಳು, ಪಿಪಾಸಾರೋಗವು ಹುಟ್ಟುತ್ತವೆ : ಈ ಪಾಪ ನಿವಾರಣೆಗಾಗಿ ಚಾಂದ್ರಾಯಣವ್ರತವನ್ನಾಗಲೀ, ಯವಮಧ್ಯ ಚಾಂದ್ರಾಯಣವ್ರತವನ್ನಾದರೂ ಮಾಡಿದಮೇಲೆ (ಇದಮಾದಿ ಪ್ರವೇಹತ) ಇತ್ಯಾದಿ ಮಂತ್ರಗಳ ಜಪಮಾಡಿ, ಈ ಮಂತ್ರದಿಂದ ಸಹಸ್ರಾಭಿಮಂತ್ರಿತಗಳನ್ನು ಹೋಮಮಾಡಿದರೆ ಈ ಪಾಪವು ನಿವಾರಣೆಯಾಗುತ್ತದೆ.

ಕುದುರೆ ಮುಂತಾದವುಗಳ ಸಮಾಗಮ ಮಾಡಿದವನಿಗೆ ವಾತವೇಹವು ಹುಟ್ಟುತ್ತದೆ ; ಇದಕ್ಕೆ ಚಾಂದ್ರಾಯಣ ವ್ರತ ಮಾಡಿದರೆ ಪರಿಹಾರವಾಗುತ್ತದೆ.

ಹುಣ್ಣಿಮೆ ಮುಂತಾದ ಪರ್ವಕಾಲಗಳಲ್ಲಿ ಸ್ವಸ್ತ್ರೀ ಸಮಾಗಮವನ್ನು ಮಾಡಿದವನಿಗೆ ಅಥವಾ ಕನ್ಯಾಸ್ತ್ರೀ ಸಮಾಗಮ ಮಾಡಿದವನಿಗೆ ವಾತಮೇಹವು ಹುಟ್ಟುತ್ತದೆ; ಇದಕ್ಕೆ ಚಾಂದ್ರಾಯಣ ವ್ರತವನ್ನು ಮಾಡಿದರೆ ಪರಿಹಾರವಾಗುತ್ತದೆ

ಮಾತೃಗಮನವನ್ನು ಮಾಡಿದವನಿಗೆ ವಧಮೇಹವೂ, ಸಹೋದರೀ ಗಮನ ಮಾಡಿದವನಿಗ ಇಕ್ಷುಮೇಹವೂ ಪ್ರಾಪ್ತವಾಗುತ್ತದೆ : ಈ ಪಾಪಗಳು ಶಡ್ಡ ಚಾಂದ್ರಾಯಣ, ಪಂಚಾಬ್ದ ಚಾಂದ್ರಾಯಣ, ಶ್ಯೆಷ್ಟ ಚಾಂದ್ರಾಯಣ ವ್ರತಗಳನ್ನು ಕ್ರಮವಾಗಿ ಮಾಡಿದರೆ ಪರಿಹಾರವಾಗುತ್ತದೆ

[ಮುಂದುವರಿಯುವುದು]

★

ಗ ಣ ಪ ತಿ ಪೂ ಜೆ

ಹೊಂಗನೂರು ಶಾಖಾ ಶಾಸ್ತ್ರಧರ್ಮ ಪ್ರಚಾರ ಸಭೆಯವರು ಗತ ಡಿಸೆಂಬರ್ ತಿಂಗಳಿನಿಂದಲ್ಲಿ ದಿನಾಂಕ ೩೦-೮-೬೫ ರಿಂದ ೧-೯-೬೫ ರವರೆಗೆ ಶ್ರೀ ಗಣಪತಿ ಪೂಜೆ ಏರ್ಪಡಿಸಿದ್ದರು : ಸರ್ವಶ್ರೀ ಟಿ ತಿಮ್ಮೇಗೌಡರು, ಸಿ ದಾಸೇಗೌಡರು, ಕೃಷ್ಣೇಗೌಡರು, ಸಿ ಕೃಷ್ಣೇಗೌಡರು ಸೇವಾರ್ಥಗಳನ್ನು ಸಡೆಸಿದರು. ನಾಲ್ಕು ದಿವಸವೂ ಹಿಂದೂಧರ್ಮದ ಬಗ್ಗೆ ಉಪನ್ಯಾಸಗಳಾದುವು

ಗೋಸಂರಕ್ಷಣೆ ಮತ್ತು ಪ್ರಾಣಿದಯಾ ಕಾರ್ಯಗಳಲ್ಲಿ ಹೆಚ್ಚಿನಾಸಕ್ತಿ ಇಡಿಯಲಿ

Help The Gorakshana

ಸಹಾಯಕರು ರೂ 10, ಪ್ರೋತ್ಸಾಹಕರು ರೂ 25 : (ಒಂದು ಸಾರಿಯಾಗಲಿ)

ಗೋರಕ್ಷಣೆಗೆ ಲೇಖನಗಳನ್ನೂ ಪ್ರೋತ್ಸಾಹ ಧನವನ್ನೂ ವಂದನಾಪೂರ್ವಕ ವಾಗಿ ಸ್ವೀಕರಿಸಲಾಗುವುದು

ವಿಳಾಸ— ಗೋರಕ್ಷಣ ಆಫೀಸು, ಚಾಮರಾಜಪುರಂ, ಮೈಸೂರು 4

ವುಡಲ್ಯಾಂಡ್ಸ್ ಯಶಸ್ವಿ 4 ನೇ ವಾ

ನೀವು ಇದುವರೆಗೂ ನೋಡದಿರುವ ಅದ್ಭುತ ದೃಶ್ಯಗಳನ್ನೂ, ವಿಚಿತ್ರಗಳನ್ನೂ ನೋಡಿ ಆನಂದಿಸಿ

ಭೂತ್ ಬಂಗ್ಲ (ಹಿಂದಿ) Bhoot Bangl

ಮುಹಮ್ಮದ್, ಕನಿಜ, ನಾಜಿಂ ಹುಸೆನ್, ಅಸಿತ್ ಸೇನ್ ನಾನಾವಿಧ ಸಿಕರ್

ಪ್ರತಿ ದಿನ 3 ಪ್ರದರ್ಶನಗಳು

ಅಪೆರ— ಅಮೋಘ 4 ನೇ ವಾ

ವೀರ ಅಬಿಮನು (ತೆಲುಗು)

ನಟರು— ಎಸ್ ಟಿ ರಾವ ರಾವ್, ಕಾಂಚನ, ಕಾಂತಾರಾವ್, ರಾಜನಾಲ ಪದ್ಮನಾಭಂ, ಸೋಬರ್ ಬಾಬು, ಜಿ ವಂಲಕ್ಷ್ಮಿ [ದಿನ 3 ಆಟಗಳು

SHAKTI SUDHA

A Superb Tonic

ಆಶೋಕ ಏಜೆನ್ಸೀಸ್

ಲ್ಯಾನ್ಸ್‌ಡೌನ್ ಬಿಲ್ಡಿಂಗ್ಸ್, ಮೈಸೂರು

ಎಲ್ಲ ವಿಧದ ಆಯುರ್ವೇದ ಔಷಧಗಳೂ ನಮ್ಮಲ್ಲಿ ದೊರೆಯುತ್ತವೆ

ರೋಗಿಗಳಿಗೆ ಸೂಕ್ತ ಔಷಧಿ ಕೊಡಲಾಗುತ್ತದೆ

Quality Printing — Neat Binding

Lakshminarasimha Press

Sivarampet, Mysore

Protect the Cow

ಗೋರಕ್ಷಣೆಗೆ ಬೆಂಬಲ ನೀಡಿ

ಶ್ರೀ ದ್ವಾರಕಾ ಜಗದ್ಗುರು ಮಹಾಸ್ವಾಮಿಗಳವರ, ಶ್ರೀ ಶೃಂಗೇರಿ ಜಗದ್ಗುರು ಮಹಾಸ್ವಾಮಿಗಳವರ ಉದಾರ ಅನುಗ್ರಹ ಕೃಪೆಯಿಂದಾಗಿ

ಕನ್ನಡನಾಡಿನಲ್ಲಿ ಗೋರಕ್ಷಣೆ, ಪ್ರಾಣಿದಯೆ, ತಾಖಾಹಾರ, ಪಶುವೈದ್ಯ ವಿಚಾರಗಳಿಂದ ಕೂಡಿದ ಏಕೈಕ ಪ್ರಚಾರ ಮಾಸಪತ್ರಿಕೆ : ವಾರ್ಷಿಕ ಚಂದ 50 ನ್ಯೆಪೈ

Edited, Printed & Published by Dharma prachara nitratha
M S Krishna Rao (Proprietor) at the Satyavadi Press
Chamarajapuram, Mysore 4